# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 279<br>(ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾಯಿತ) |
| ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18–08–2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬಳ್ಳಾರಿ ನಗರದ ಶ್ರೀ ಗಡಿಗಿ ಚನ್ನಪ್ಪ ವೃತ್ತದಲ್ಲಿ ಮಹಾತ್ಮ ಗಾಂಧಿ ಹಾಗೂ ಕಳಾ ಪ್ರಪೂರ್ಣ ಶ್ರೀ ರಾಘವ ಮುತ್ಥಳಿ ಇರುವುದು ನಿಜವೇ? | ಬಳ್ಳಾರಿ ನಗರದ ಶ್ರೀ ಗಡಿಗಿ ಚನ್ನಪ್ಪ ವೃತ್ತದಲ್ಲಿ ಮಹಾತ್ಮ ಗಾಂಧಿ ಮುತ್ಥಳಿ ಇರಲಿಲ್ಲ ಹಾಗೂ ಕಳಾ ಪ್ರಪೂರ್ಣ ಶ್ರೀ ರಾಘವ ಮುತ್ಥಳಿ ಇರುವುದು ನಿಜ. |
| ಆ) | ಇದ್ದಲ್ಲಿ ಬಳ್ಳಾರಿ ನಗರದ ಶ್ರೀ ಗಡಿಗಿ ಚನ್ನಪ್ಪ ವೃತ್ತದಲ್ಲಿ (ನೇತಾಜಿ) ಮಹಾತ್ಮ ಗಾಂಧಿ ಹಾಗೂ ಕಳಾ ಪ್ರಪೂರ್ಣ ಶ್ರೀ ರಾಘವ ಮುತ್ಥಳಿ ಹಾಲಿ ಸ್ಥಳದಲ್ಲಿ ಕಾಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | 2022–23 ನೇ ಸಾಲಿನ 5054 ಅಪೆಂಡಿಕ್ಸ್–ಈ ಯೋಜನೆಯಡಿಯಲ್ಲಿ ಬಳ್ಳಾರಿ ನಗರದ ಶ್ರೀ ಗಡಿಗಿ ಚನ್ನಪ್ಪ ವೃತ್ತದ ಕ್ಲಾಕ್ ಟವರ್ ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ (ನೇತಾಜಿ) ಮಹಾತ್ಮ ಗಾಂಧಿ ಮುತ್ಥಳಿ ಇರಲಿಲ್ಲ ಹಾಗೂ ಕಳಾ ಪ್ರಪೂರ್ಣ ಶ್ರೀ ರಾಘವ ಮುತ್ಥಳಿ ಹಾಲಿ ಸ್ಥಳದಲ್ಲಿ ಕಾಣೆಯಾಗಿರುವುದು ಸತ್ಯಕ್ಕೆ ದೂರವಾಗಿದ್ದು, ಮುತ್ಥಳಿಯು ರಸ್ತೆ ವಿಭಜಕದಲ್ಲಿ ಈ ಹಿಂದೆ ಸ್ಥಾಪಿಸಲಾಗಿತ್ತು, ರಸ್ತೆ ವಿಭಜಕ ಕಾಮಗಾರಿ ಕೈಗೊಳ್ಳುವ ಸಮಯದಲ್ಲಿ ಮುತ್ಥಳಿಯ ಬಗ್ಗೆ ರಾಘವ ಕಳಾ ಮಂದಿರ ಟ್ರಸ್ಟ್ ಬಳ್ಳಾರಿ ರವರ ಜೊತೆ ಚರ್ಚಿಸಿ ಅವರಿಗೆ ಹಸ್ತಾಂತರಿಸಲಾಗಿದೆ. |
| ಇ) | ಇಲ್ಲದಿದ್ದಲ್ಲಿ ಬಳ್ಳಾರಿ ನಗರದ ಶ್ರೀ ಗಡಿಗಿ ಚನ್ನಪ್ಪ ವೃತ್ತದಲ್ಲಿ (ನೇತಾಜಿ) ಮಹಾತ್ಮ ಗಾಂಧಿ ಹಾಗೂ ಕಳಾ ಪ್ರಪೂರ್ಣ ಶ್ರೀ ರಾಘವ ಮುತ್ಥಳಿ ಸ್ಥಾಪಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು? | IRC ಹಾಗೂ ರಾಜ್ಯ ಹೆದ್ದಾರಿ ನಿಯಮಗಳ ಪ್ರಕಾರ ಯಾವುದೇ ಮುತ್ಥಳಿಗಳನ್ನು ಸಾರ್ವಜನಿಕರು ಓಡಾಡುವ ರಸ್ತೆಯ ಮಧ್ಯ ಭಾಗದಲ್ಲಿ ಸ್ಥಾಪಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ರಾಘವ ಕಳಾ ಮಂದಿರ ಟ್ರಸ್ಟ್, ಬಳ್ಳಾರಿ ರವರ ಜೊತೆ ಚರ್ಚಿಸಲಾಗಿದ್ದು, ಅವರು ಕೋರಿರುವ ಸ್ಥಳವಾದ ರಾಘವ ಕಲಾ ಮಂದಿರದ ಆವರಣದಲ್ಲಿ ಮುತ್ಥಳಿ ಸ್ಥಾಪಿಸಲಾಗುವುದು. |

ಸಂಖ್ಯೆ: ಲೋಇ 225 ಸಿಎಎಸ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು